# ‘ಕೌನ್‌ಬನೇಗ ಕರೋಡಪತಿ’ಯಲ್ಲಿ..

ಕೌನ್‌ಬನೇಗ ಕರೋಡಪತಿಯಲ್ಲಿ ಭಾಗವಹಿಸಿ, ಬಿಗ್‌ಬಿ ಜತೆ ಮಾತನಾಡಿದ್ದು, ಅವರೊಂದಿಗೆ ಫೋಟೊ ಕ್ಲಿಕ್ಕಿಸಿಕೊಂಡದ್ದು ಎಲ್ಲವೂ ಕನಸಿನಂತೆ ನಡೆದು ಹೋಯಿತು. ಆ ನೆನಪು ಮಾತ್ರ ಎಂದಿಗೂ ಮರೆಯಲಾಗದಂಥದ್ದು.

■ ವೆಂಕಟೇಶ ಮುದಗಲ್

ಸುಮಾರು 13 ವರ್ಷಗಳ ಹಿಂದೆ ಬಿಗ್‌ಬಿ ಅಮಿತಾಬ್‌ಬಚ್ಚನ್ ನಡೆಸಿಕೊಡುತ್ತಿದ್ದ ‘ಕೌನ್‌ಬನೇಗ ಕರೋಡಪತಿ’ ಟೀವಿಯಲ್ಲಿ ಬಹಳ ಜನಪ್ರಿಯ ಕಾರ್ಯಕ್ರಮವಾಗಿತ್ತು. ನನಗೂ ಬಿಗ್‌ಬಿ ಸಾರಥ್ಯದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರೆದುರು ಹಾಟ್ ಸೀಟ್‌ನಲ್ಲಿ ಕುಳಿತು ಕೊಳ್ಳಬೇಕು ಎಂಬ ಅದಮ್ಯ ಆಸೆ ಇತ್ತು. ಈ ಕಾರ್ಯಕ್ರಮ 2000ದಲ್ಲಿ ಆರಂಭಗೊಂಡಾಗಿನಿಂದಲೂ ಇತ್ತು.

ನನ್ನ ಆಸೆ ನೆರವೇರುತ್ತದೆ ಅಂದುಕೊಂಡಿರಲೇ ಇಲ್ಲ. ಸಹೋದರ ಪ್ರಾಣೇಶ ಮುದಗಲ್ ಜೊತೆ ನವೆಂಬರ್ 2005ರಲ್ಲಿ ಕೌನ್‌ಬನೇಗ ಕರೋಡಪತಿಗೆ ಹೋಗಿ ಭಾಗವಹಿಸುವ ಅವಕಾಶ ಸಿಕ್ಕಿಯೇ ಬಿಟ್ಟಿತು. ಛಲ ಬಿಡದ ತಿವಿಕ್ರಮನಂತೆ 2005ರಿಂದಲೇ ನನ್ನ ಪ್ರಯತ್ನ ಶುರುವಾಗಿತ್ತು. ಈ ಕನಸು ನನಸಾಗಿದ್ದು 2011ರಲ್ಲಿ. ಸುಮಾರು 6 ವರ್ಷಗಳ ತಪಸ್ಸಿಗೆ ಅಶ್ವಿನಿ ದೇವತೆಗಳ ತಥಾಸ್ತು ಸಿಕ್ಕಿತ್ತು. ಕೌನ ಬನೆಗ ಕರೋಡಪತಿಯಲ್ಲಿ ಅವಕಾಶ ಪಡೆದು ಕೊಳ್ಳಲು ಮೊದಲನೆ ಅರ್ಹತೆಯೇ ಅದೃಷ್ಟ.

ಕೌನ್ ಬನೇಗ ಕರೋಡಪತಿ (ಕೆಬಿಸಿ)ಯ ಎಲ್ಲ ಹಂತಗಳಲ್ಲಿ ಆಯ್ಕೆಗೊಳ್ಳಲು ಅದೃಷ್ಟದ ಪಾತ್ರ ಹಿರಿದು. ಮೊದಲ ಎರಡು ಹಂತದ ಆಯ್ಕೆ ಪ್ರಕ್ರಿಯೆಯಲ್ಲಿ ಕಂಪೂಟರ್‌ನಲ್ಲಿ ಅಳವಡಿಸಲಾದ ರ್‍ಯಾಂಡಮೈಸೇಷನ್ ಸಾಫ್ಟ್‌ವೇರ್ ನಿಮ್ಮನ್ನು ಆಯ್ಕೆ ಮಾಡಿದಲ್ಲಿ, ಮುಂದಿನ ಹಂತವೇ ಆಡಿಷನ್. ಕೆಬಿಸಿಯಲ್ಲಿ ಆಯ್ಕೆಗೊಳ್ಳಲು ನಮ್ಮ ಸಾಮರ್ಥ್ಯ ಸಾಬೀತುಪಡಿಸಿ ಆಯ್ಕೆ ಜ್ಯೂರಿಯ ಮನ ಗೆದ್ದಲ್ಲಿ ಶೂಟಿಂಗಗೆ ಬುಲಾವ್ ಗ್ಯಾರಂಟಿ.

ಕೆಬಿಸಿಯವರು ವ್ಯವಸ್ಥೆಮಾಡಿರುವ ವಿಮಾನದ ಮೂಲಕ ಆಗಸದಲ್ಲಿ ಹಾರಾಡುತ್ತಾ ಮುಂಬೈ ತಲುಪಬಹುದು. 10ರಲ್ಲಿ ಒಬ್ಬರಾಗಿ ಆಯ್ಕೆಗೊಂಡ ಮೇಲೆ ಹಾಟ್ ಸೀಟ್‌ನಲ್ಲಿ ಕುಳಿತುಕೊಳ್ಳುವುದು ಇನ್ನೂ ಕಷ್ಟದ ಸಂಗತಿ. ಬಹಳಷ್ಟು ಸಲ ಮೊದಲಿಗನಾಗಿ ಉತ್ತರಿಸುವ ಧಾವಂತದಲ್ಲಿ ತಪ್ಪು ಉತ್ತರ ನೀಡುವ ಸಂದರ್ಭಗಳೇ ಅಧಿಕ. 10 ಸೆಕೆಂಡ್‌ನಲ್ಲಿ ಕೇಳಲಾದ ಪ್ರಶ್ನೆಯನ್ನು ಅರ್ಥೈಸಿಕೊಂಡು ಉತ್ತರಗಳನ್ನು ಟ್ಯಾಬ್ಲೆಟ್‌ನಲ್ಲಿ ಕ್ಲಿಕ್ ಮಾಡುವುದು ಸುಲಭ ಸಾಧ್ಯವಲ್ಲ. ಹೃದಯ ಬಡಿತದ ಲಯ ನಮಗೆ ಕೇಳುತ್ತಿರುತ್ತದೆ. ಈ ಹಂತದಲ್ಲಿ ಜಯಶಾಲಿಯಾದರೆ ಡಾ.ಅಮಿತಾಬ ಬಚ್ಚನ್ ಅವರ ಮುಂದೆ ಹಾಟ್ ಸೀಟ್‌ನಲ್ಲಿ ಕುಳಿತುಕೊಳ್ಳುವ ಸೌಭಾಗ್ಯ ಸಿಗುತ್ತದೆ.

ನಾನಂತು ತುಂಬಾ ಅದೃಷ್ಟಶಾಲಿ. ಸಹೋದರ ಪ್ರಾಣೇಶ ಮುದಗಲ್ ಜೊತೆ ಎಲ್ಲ ಹಂತಗಳಲ್ಲೂ ಜಯಶಾಲಿಯಾಗಿದ್ದೆ. ಸಮಸ್ಯೆ ಬಂದಿದ್ದೇ ‘**fastest fingers first**’ ಸುತ್ತಿನಲ್ಲಿ. ಮೊದಲ 4 ದಿನ ನಡೆದ ಶೂಟಿಂಗ್‌ನಲ್ಲಿ ಜಯಮಾಲೆ ಧರಿಸಲಾಗಿರಲಿಲ್ಲ. ಏನೇನೊ ಸಮಸ್ಯೆ. ಉತ್ತರ ತಿಳಿದಿದ್ದರು ಮೊದಲಿಗನಾಗಿರಲಿಲ್ಲ. 3 ಮತ್ತು 4ನೆ ಸ್ಥಾನ ಲಭಿಸುತ್ತಿತ್ತು. 5ನೆಯ ದಿನದ ಶೂಟ್ ಉಳಿದಿತ್ತು. 5 ಜನ ಸ್ಪರ್ಧಿಗಳು ಉಳಿದಿದ್ದೆವು. ಮಧ್ಯೆ ಒಂದು ದಿನ ರವಿವಾರದ ಕಾರಣ ವಿರಾಮವಿತ್ತು. ಕೊನೆ ಅವಕಾಶದ ಎಚ್ಚರಿಕೆಯ ಗಂಟೆಯ ನಿನಾದ ರಿಂಗಣಿಸುತ್ತಿತ್ತು. ಶತಾಯಗತಾಯ ಹಾಟ್ ಸೀಟ್ ಮೇಲೆ ಕೂರಲೇಬೇಕೆಂಬ ಮಹದಾಸೆಯಿಂದ ಉಪಾಹಾರ ಮುಗಿಸಿ ನಂತರ ಸತತ 5 ಗಂಟೆ ಅಧ್ಯಯನ ಮಾಡಿದೆ. ಸಾಮಾನ್ಯ ಜ್ಞಾನ, ಇತಿಹಾಸ, ರಾಜಕಾರಣ, ಕ್ರೀಡೆ ಹೀಗೆ ಹತ್ತು ಹಲವು ವಿಷಯಗಳತ್ತ ನನ್ನ ಗಮನಹರಿಸಿದ್ದೆ. ಮರುದಿನ ಎಂದಿನಂತೆ ನಮ್ಮನ್ನಿಳಿಸಿದ ಪಂಚತಾರಾ ಹೋಟೆಲ್‌ನಿಂದ ಮುಂಬೈನ ಗೋರೆಗಾಂವನ ಫಿಲ್ಮ್‌ಸಿಟಿಯ ಕೆಬಿಸಿ ಸ್ಟುಡಿಯೋಕ್ಕೆ ನಮ್ಮನೆಲ್ಲಾ ಕರೆದುಕೊಂಡು ಹೋದರು.

ಮಧ್ಯಾಹ್ನ 12ರ ಸುಮಾರಿಗೆ ದೀಪಾವಳಿಯ ಹಬ್ಬದಂದು ಈ ಕಂತು ಪ್ರಸಾರವಾಗುತ್ತಿದ್ದ ಕಾರಣ ಕೆಂಪು ನಿಲವಂಗಿ ಧರಿಸಿ ಆಕರ್ಷಕವಾಗಿ ಕಾಣುತ್ತಿದ್ದ



ಅಮಿತಾಬ್ ಕೆಬಿಸಿ ಸೆಟ್ ಪ್ರವೇಶಿಸಿ ಎಲ್ಲಾ ಸ್ಪರ್ಧಾಳುಗಳತ್ತ ಒಮ್ಮೆ ದೃಷ್ಟಿ ಹಾಯಿಸಿದರು. 4 ಜನ ಸಪ್ಪೆ ಮೋರೆ ಹಾಕ್ಕೊಂಡಿದ್ರು. ಅದೇಕೋ, ಹಿಂದಿನ ದಿನದ ಅಧ್ಯಯನದಿಂದ ಗೆಲ್ಲಲೇಬೇಕೆಂಬ ಛಲದ ಆತ್ಮವಿಶ್ವಾಸ ನನ್ನ ಮುಖಾರವಿಂದದಲ್ಲಿ ಮಂದಹಾಸದ ರೂಪದಲ್ಲಿ ಪ್ರತಿಫಲಿಸಿತ್ತು. ನೇರವಾಗಿ ನನ್ನತ್ತ ಸಾಗಿ ಬಂದ ಬಿಗ್ ಬಿ ಕಂಡು ಎದ್ದು ನಿಂತು ಗೌರವ ನೀಡಲು ಮುಂದಾದೆ. ‘ಇಸದ ಕಾ ಕೋಯೀ ಜರೂರತ್ ನಹಿ ಹೈ,,,ಅಚ್ಛಾ ಖೇಲನಾ’ ಎಂದು ನನಗೆ ಹಸ್ತ ಲಾಘವ ನೀಡಿದರು. ಆ ಘಳಿಗೆ ನನ್ನ ಇಚ್ಛಾ ಶಕ್ತಿಯನ್ನು ವೃದ್ಧಿಸಿತು. ನಂತರ ಕೇಳಲಾದ ಕ್ರಿಕೆಟ್ ಕುರಿತಾದ ಪ್ರಶ್ನಗೆ ತ್ವರಿತವಾಗಿ ಉತ್ತರಿಸಿ ಸರಿ ಉತ್ತರ ಹೇಳಿ ‘ಸಬ್ ಸೇ ತೇಜ ಜವಾಬ್ ಕಿಸಕಾ ಹೈ’ ಎನ್ನುತ್ತ ಅಮಿತಾಬ್ ನನ್ನ ಹೆಸರನ್ನು ಹೇಳುವ ಮೊದಲೇ ನಾನು ಅವರನ್ನು ಆಲಂಗಿಸಿ ಹಾಟ್ ಸೀಟ್ ಮೇಲೆ ಕೊನೆಗೂ ವಿರಾಜಮಾನನಾದೆ.

ಆ ದಿನ ಸುಮಾರು ಮೂರು ಗಂಟೆ ಕಾಲ ಅಲ್ಲಿ ಕಳೆದ ಸುಂದರ ಹಾಗೂ ಖುಷಿಯ ಕ್ಷಣಗಳನ್ನು ಯಾವತ್ತೂ ಮರೆಯಲಾರೆ. ಕೆಬಿಸಿಯ ವೇದಿಕೆಯಲ್ಲಿ ಕನ್ನಡದಲ್ಲಿ ಮಾತಾಡಿ ತಾಯಿ ಭುವನೇಶ್ವರಿಯ ಕೀರ್ತಿ ಪತಾಕೆಯನ್ನು ಅಲ್ಲಿ ಹಾರಿಸಿದ್ದು ನನಗೆ ಸಂತಸ ನೀಡಿದೆ.

■